

# ವೀರ್ಯ ತಪಾಸಣೆ ಏಕೆ? ಹೇಗೆ?

**ಬರಿಗಣ್ಣಿನ ಪರೀಕ್ಷೆಯಲ್ಲಿ ವೀರ್ಯದ ಪರಿಮಾಣ, ಅದರ ಸ್ನಿಗ್ಧತೆ, ಬಣ್ಣ, ಅದು ದ್ರವೀಕರಿಸಲು ತೆಗೆದುಕೊಳ್ಳುವ ಸಮಯ ಮೊದಲಾದ ಅಂಶಗಳನ್ನು ಗಮನಿಸಲಾಗುತ್ತದೆ.**



**ಡಾ. ವಿನಯ ಶ್ರೀನಿವಾಸ್**
ಪೆಥಾಲಜಿಸ್ಟ್, ಮ್ಯಾಕ್ಸ್ ಆಸ್ಪತ್ರೆ ಶಿವಮೊಗ್ಗ

ಯಾವುದೇ ಕುಟುಂಬ ಯೋಜನಾ ವಿಧಾನವನ್ನು ಬಳಸದ ದಂಪತಿ ವಿವಾಹವಾಗಿ ಒಂದೆರಡು ವರ್ಷಗಳ ನಂತರವೂ ಮಗುವಾಗುವ ಸೂಚನೆ ಕಾಣದಿದ್ದಾಗ ಆತಂಕಗೊಳ್ಳುತ್ತಾರೆ. ಸಂತಾನಲಕ್ಷ್ಮಿ ಒಲಿಯದೇ ಇದ್ದಾಗ ಅದು ಇಡೀ ಕುಟುಂಬದ ನೆಮ್ಮದಿಯನ್ನು ಕೆಡಿಸುತ್ತದೆ. ಮನೆಯ ಹಿರಿಯರೂ ಈ ಬಗ್ಗೆ ಚಿಂತಿತರಾಗುತ್ತಾರೆ, ವೈದ್ಯರಲ್ಲಿ ಸಮಾಲೋಚನೆಗೆ ತೆರಳಲು ಒತ್ತಾಯಿಸುತ್ತಾರೆ.

ಸಂತಾನಹೀನತೆ ಎಂಬುದು ಮಹಿಳೆ ಮತ್ತು ಪುರುಷರಿಬ್ಬರಲ್ಲಿಯೂ ಕಂಡು ಬರಬಹುದು. ಹಾಗೆಂದೇ ಈ ಸಮಸ್ಯೆ ಎಂದು ದಂಪತಿ ವೈದ್ಯರಲ್ಲಿ ಸಮಾಲೋಚನೆಗೆ ಬಂದಾಗ ಪತಿ ಪತ್ನಿಯರಿಬ್ಬರನ್ನೂ ತಪಾಸಣೆಗೆ ಒಳಪಡಿಸುತ್ತಾರೆ. ಅವರು ಸೂಚಿಸುವ ಮೊದಲ ಪರೀಕ್ಷೆ ಪತಿಯ ವೀರ್ಯ ಪರೀಕ್ಷೆ. ಪತ್ನಿಯನ್ನು ತಪಾಸಣೆಗೆ ಒಳಪಡಿಸುವ ಮೊದಲು ಪತಿಯನ್ನು ವೀರ್ಯ ತಪಾಸಣೆ ಮಾಡಿಸಿಕೊಂಡು ಬರಲು ವೈದ್ಯರು ತಿಳಿಸುತ್ತಾರೆ. ಏಕೆಂದರೆ ಇದೊಂದು ಕಡಿಮೆ ಖರ್ಚಿನ, ಯಾವುದೇ ಹೆಚ್ಚುವರಿ ಉಪಕರಣಗಳಿಲ್ಲದೆ, ಸುಲಭವಾಗಿ ಪ್ರಯೋಗಾಲಯದಲ್ಲಿ ಮಾಡಬಹುದಾದ ಪರೀಕ್ಷೆ. ಈ ತಪಾಸಣೆಯ ವರದಿಯನ್ನು ನೋಡಿದ ನಂತರ ಮುಂದಿನ ತಪಾಸಣೆಗಳ ಬಗ್ಗೆ ವಿಚಾರ ಮಾಡುತ್ತಾರೆ. ಮೊದಲ ವರದಿಯಲ್ಲಿ ದೋಷ ಕಂಡುಬಂದರೆ ಮತ್ತೊಮ್ಮೆ ಪರೀಕ್ಷೆ ಮಾಡಿಸಲು ಸೂಚಿಸುತ್ತಾರೆ. ವೀರ್ಯ ತಪಾಸಣೆಯಲ್ಲಿ ಯಾವುದೇ ದೋಷವಿಲ್ಲದಿದ್ದಾಗ ಮಾತ್ರ ಮಹಿಳೆಯನ್ನು ಸಂಬಂಧಪಟ್ಟ ವಿವಿಧ ತಪಾಸಣೆಗೆ ಒಳಪಡಿಸುತ್ತಾರೆ.

### ಯಾವ ಯಾವ ಸಮಸ್ಯೆಗಳಲ್ಲಿ ಈ ತಪಾಸಣೆ?

- ಸಂತಾನಹೀನತೆ ಸಮಸ್ಯೆ
- ಪುರುಷರಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆಯ ಪರಿಣಾಮಕಾರಿತ್ವವನ್ನು ಗಮನಿಸಲು.
- ಪುರುಷರಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆಯಾದ ಬಳಿಕ ಅನ್ಯ ಕಾರಣಗಳಿಗಾಗಿ ವೀರ್ಯ ನಾಳಗಳನ್ನು ಮರು ಜೋಡಣೆ ಮಾಡಿದ ನಂತರ.

### ವೀರ್ಯ ಸಂಗ್ರಹ ಹೇಗೆ?

ಸಾಮಾನ್ಯವಾಗಿ ಪ್ರಯೋಗಾಲಯದ ಬಳಿಯ ಶೌಚಾಲಯದಲ್ಲಿಯೇ ಸಂಗ್ರಹಿಸುವುದು ಸೂಕ್ತ. ಒಂದು ವೇಳೆ ಮನೆಯಲ್ಲಿ ಸಂಗ್ರಹ ಮಾಡುವುದಾದರೆ, ಸಂಗ್ರಹಿಸಿ ಒಂದು ಗಂಟೆಯ